# ವಿ ರೈತ ಮಿತ್ರ

■ ಜೈವಿಕ ಸೂಕ್ಷ್ಮಾಣು ಜೀವಿಗಳ ಸಮೂಹವನ್ನು (ಮೈಕ್ರೋಬಿಯಲ್ ಕನ್ಸಾರ್ಷಿಯಂ) ಗೊಬ್ಬರಕ್ಕೆ ಎಷ್ಟು ಪ್ರಮಾಣದಲ್ಲಿ ಬಳಸಬೇಕು?

| **ವಿಶ್ವೇಶ್** ದೇವನಹಳ್ಳಿ



ಜೈವಿಕ ಗೊಬ್ಬರಗಳು ಸಾರಜನಕವನ್ನು ಸ್ಥಿರೀಕರಿಸುವ, ರಂಜಕ ಮತ್ತು ಸತುವನ್ನು ಕರಗಿಸುವ ಗುಣ ವಿಶೇಷತೆಗಳನ್ನು ಹೊಂದಿ ರುತ್ತವೆ. ಜೈವಿಕ ಸೂಕ್ಷ್ಮಾಣು ಜೀವಿಗಳ ಸಮೂಹವನ್ನು ಕೊಟ್ಟಿಗೆ ಗೊಬ್ಬರ ಅಥವಾ ತೆಂಗಿನಕಾಯಿ ನಾರಿನಲ್ಲಿ ಬಳಸಬಹುದು.

**ನಾರಿನಲ್ಲಿ ಸೇರಿಸುವ ಪದ್ಧತಿ:** 20 ಲೀ. ನೀರಿಗೆ 1 ಕಿ.ಗ್ರಾಂ ಮೈಕ್ರೋಬಿಯಲ್ ಕನ್ಸಾರ್ಷಿಯಂ ಅನ್ನು ಬೆರೆಸಿ 1 ಟನ್ ತೆಂಗಿನಕಾಯಿಯ ನಾರಿಗೆ ಸಮನಾಗಿ ಬೆರೆಸುವುದು.

**ಗೊಬ್ಬರಕ್ಕೆ ಸೇರಿಸುವ ಪದ್ದತಿ:** 5 ಕಿ.ಗ್ರಾಂ ಮೈಕ್ರೋಬಿಯಲ್ ಕನ್ಸಾರ್ಷಿಯಂ ಅನ್ನು 500 ಕಿ.ಗ್ರಾಂ ಕೊಟ್ಟಿಗೆ ಗೊಬ್ಬರದೊಡನೆ ಮಿಶ್ರಣ ಮಾಡುವುದು, ಇದನ್ನು 1 ಎಕರೆ ಜಮೀನಿಗೆ ಸೇರಿಸಬಹುದು.

| **ಡಾ. ಕೆ.ಪಿ.ರಘುಪ್ರಸಾದ್** ಪ್ರಾಧ್ಯಾಪಕರು, ಮುಖ್ಯಸ್ಥರು

■ ರಾಗಿಯಲ್ಲಿ ಕಳೆಗಳ ಸಮಸ್ಯೆ ಹೆಚ್ಚಾಗಿದ್ದು ಸೂಕ್ತ ನಿಯಂತ್ರಣ ಕ್ರಮಗಳನ್ನು ತಿಳಿಸಿ?

| **ಗೋಪಾಲ ರೆಡ್ಡಿ** ಚಿಂತಾಮಣಿ

ರಾಗಿ ನಮ್ಮ ರಾಜ್ಯದ ದಕ್ಷಿಣ ಜಿಲ್ಲೆಗಳ ಪ್ರಮುಖ ಖುಷ್ಕಿ ಬೆಳೆ. ಕಳೆ ನಿಯಂತ್ರಣ ಕುರಿತು ಬೆಳೆಗೆ ಸೂಚಿಸಿದಂತೆ ಅನುಸರಿಸುವುದು. ಉದಯಪೂರ್ವ ಕಳೆ ನಿಯಂತ್ರಣಕ್ಕಾಗಿ ಎಕರೆಗೆ 600 ಎಂ.ಎಲ್ ಬೂಟಾಕ್ಲೋರ್ 50 ಇ.ಸಿ.ಯನ್ನು ಅಥವಾ 170 ಮಿ.ಲೀ. ಆಕ್ಸಿಫ್ಲೋರೊಫಿನ್ 23.5 ಇ.ಸಿ.ಯನ್ನು ಅಥವಾ ಬೆನ್‌ಸಲ್ಫೂರಾನ್ ಮಿಥೈಲ್ + ಪ್ರಿಟಿಲಾಕ್ಲೋರ್ ಶೇ.6.6 ಅನ್ನು 1.20 ಕಿ.ಗ್ರಾಂ. ಯಂತೆ ನಾಟಿಯಾದ ದಿವಸ ಅಥವಾ 3 ದಿವಸಗಳ ಒಳಗೆ 300 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸುವುದರಿಂದ ಕಳೆಗಳನ್ನು ಹತೋಟಿ ಮಾಡಬಹುದು. ಕಳೆನಾಶಕಗಳನ್ನು ಸಿಂಪಡಿಸುವಾಗ ಜಮೀನಿನಲ್ಲಿ ನೀರು ನಿಂತಿರಬಾರದು ಹಾಗೂ ಸಿಂಪಡಣೆ ಆದ 3-4 ದಿನಗಳವರೆಗೂ ನೀರನ್ನು ಹಾಯಿಸಬಾರದು. ಒಂದು ವೇಳೆ ಸಿಂಪಡಣೆ ದಿನ ಅಥವಾ ಮರುದಿನ ಮಳೆ ಬಂದರೆ ಕಳೆನಾಶಕದ ಪರಿಣಾಮ ಗಣನೀಯವಾಗಿ ಕಡಿಮೆಯಾಗುವುದು. ಉದಯೋತ್ತರ ಕಳೆ ನಾಶಕವಾಗಿ ನಾಟಿ ಮಾಡಿದ 15-20 ದಿನಗಳ ನಂತರ 2, 4-ಡಿ ಯನ್ನು ಎಕರೆಗೆ 500 ಗ್ರಾಂ 200 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸುವುದು.

| **ಡಾ. ಎಂ.ಆರ್. ಆನಂದ** ಬೇಸಾಯ ತಜ್ಞರು

■ ಮಾವು ಬೆಳೆಯಲ್ಲಿ ಎಲೆಗಳು ತುದಿಯಿಂದ ಒಣಗುತ್ತಿದ್ದು, ಇದಕ್ಕೆ ಕಾರಣ ಮತ್ತು ಪರಿಹಾರವೇನು?

| **ಶಂಕರ್ ಗುಹಾ** ಬೆಂಗಳೂರು

ಮಾವಿನಲ್ಲಿ ಎಲೆಗಳು ತುದಿಯಿಂದ ಒಣಗುವುದನ್ನು ಟಿಪ್ ಬರ್ನ್ ಅಥವಾ ಉಪ್ಪಿನ ಗಾಯ ಎಂದು ಕರೆಯುತ್ತಾರೆ. ಇದಕ್ಕೆ ಮುಖ್ಯವಾದ ಕಾರಣಗಳೆಂದರೆ ಸರಿಯಾದ ನೀರಿನ ನಿರ್ವಹಣೆ ಇಲ್ಲದಿರುವುದು (ಮಣ್ಣಿನ ತೇವಾಂಶದಲ್ಲಿನ ತೀವ್ರವಾದ ಏರಿಳಿತಗಳು) ಅಥವಾ ಮಣ್ಣಿನಲ್ಲಿ ಉಪ್ಪು/ ಲವಣಾಂಶಗಳು ಹೆಚ್ಚಿನ ಶೇಕರಣೆಯಾಗಿರುವುದು.

**ನಿರ್ವಹಣೆ:** ಉತ್ತಮವಾದ ನೀರಿನ ನಿರ್ವಹಣೆ, ಇದರಿಂದ ಲವಣಾಂಶಗಳ ಶೇಕರಣೆ ಕಡಿಮೆಯಾಗುತ್ತದೆ, ಮಳೆಗಾಲದಲ್ಲಿ ಹಸಿರು ಗೊಬ್ಬರದ ಬೆಳೆಗಳನ್ನು ಬೆಳೆಯುವುದು ಮತ್ತು ಶೇ.50 ಹೂ ಬಿಡುವಲ್ಲಿ ಮತ್ತೆ ಉಳುಮೆ ಮಾಡುವುದು, ಇದನ್ನು ಕನಿಷ್ಠ 4 ರಿಂದ 5 ವರ್ಷಗಳವರೆಗೆ ಅಭ್ಯಾಸ ಮಾಡುವುದರಿಂದ ಈ ರೀತಿ ಸಮಸ್ಯೆಗಳನ್ನು ತಡೆಯಬಹುದು. ಸಮಸ್ಯೆ ತೀವ್ರವಿದ್ದಲ್ಲಿ ಪ್ರತಿ ಲೀಟರ್ ನೀರಿಗೆ ತಾಮ್ರದ ಆಕ್ಸಿಕ್ಲೋರೈಡ್ 4 ಗ್ರಾಂನಂತೆ ಬೆರೆಸಿ ಬುಡದ ಸುತ್ತ ಭೂಮಿಗೆ ಸುರಿಯುವುದು.

| **ಡಾ. ಕೆ.ಪಲ್ಲವಿ** ಸಸ್ಯ ಸಂರಕ್ಷಣಾ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್ಆ್ಯಪ್ ಮಾಡಿ

12-08-2024
Vijayavani Pg 06 & 09

# ಜೇನು ಸಾಕಾಣಿಕೆಯಿಂದ ಆರ್ಥಿಕ ಪ್ರಗತಿ ಸಾಧ್ಯ

**ಸಂ.ಕ. ಸಮಾಚಾರ, ಮಾಗಡಿ**

ಕೃಷಿಯಲ್ಲಿ ರೈತರು ಜೇನು ಸಾಕಾಣಿಕೆಯನ್ನು ಉಪಕಸುಬನ್ನಾಗಿ ಅಳವಡಿಸಿಕೊಂಡು ಆರ್ಥಿಕ ಪ್ರಗತಿ ಸಾಧಿಸುವಂತೆ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ. ಲತಾ ಆರ್.ಕುಲಕರ್ಣಿ ಅವರು ಹೇಳಿದರು.

ತಾಲ್ಲೂಕಿನ ಚಂದೂರಾಯನಹಳ್ಳಿ ಕೃಷಿ ವಿಜ್ಞಾನ ಕೇಂದ್ರ, ಮ್ಯಾನೇಜ್ ಹೈದರಬಾದ್, ಇವರ ಸಂಯುಕ್ತಾಶ್ರಯದಲ್ಲಿ ವೈಜ್ಞಾನಿಕ ಜೇನು ಸಾಕಾಣಿಕೆ ಮಹತ್ವದ ಕುರಿತು ಗ್ರಾಮೀಣ ಭಾಗದ 15 ಯುವಕರಿಗೆ ಹಮ್ಮಿಕೊಳ್ಳಲಾಗಿದ್ದ ಆರು ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೇಂದ್ರದ ಸಸ್ಯಸಂರಕ್ಷಣಾ ವಿಜ್ಞಾನಿ ಡಾ. ರಾಜೇಂದ್ರಪ್ರಸಾದ್, ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಾಧ್ಯಪಕರಾದ ಡಾ. ಈಶ್ವರಪ್ಪ, ಮೂರನೇ ದಿನ ಕೃಷಿ ವಿಶ್ವವಿದ್ಯಾನಿಲಯ ಪ್ರಾಧ್ಯಪಕರಾದ ಡಾ. ವಿಜಯಕುಮಾರ, ಪ್ರಗತಿಪರ ಕೃಷಿಕರಾದ ಅಶೋಕ, ರಾಜೇಂದ್ರಪ್ರಸಾದ್ ಹಾಗೂ ಕೊನೆಯ ದಿನದ ತರಬೇತಿಯಲ್ಲಿ ಕೇಂದ್ರದ ತೋಟಗಾರಿಕಾ ವಿಜ್ಞಾನಿಗಳಾದ ಡಾ. ದೀಪ ಪೂಜಾರ ಮಾತನಾಡಿದರು. 6 ದಿನಗಳ ತರಬೇತಿಯಲ್ಲಿ ಭಾಗವಹಿಸಿದ್ದ ಗ್ರಾಮೀಣ ಯುವಕರಿಗೆ ಸಮಾರೋಪ ಸಮಾರಂಭದಲ್ಲಿ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.



ಮಾಗಡಿ ತಾಲ್ಲೂಕಿನ ಚಂದೂರಾಯನಹಳ್ಳಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ವೈಜ್ಞಾನಿಕ ಜೇನು ಸಾಕಾಣಿಕೆ ಮಹತ್ವದ ಕುರಿತು ಗ್ರಾಮೀಣ ಭಾಗದ 15 ಯುವಕರಿಗೆ ಆರು ದಿನಗಳ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ ನಡೆಯಿತು.

12-08-2024
S-karnataka Pg 02

For more information visit
University Library Website
Web - uasbagrilibindia.org
E-mail- librarian@uasbangalore.edu.in

# ಅಧಿಕ ಇಳುವರಿ ನೀಡುವ 109 ತಳಿಗಳ ಲೋಕಾರ್ಪಣೆ

## ಪ್ರಧಾನಿ ಮೋದಿಯಿಂದ ಬಿಡುಗಡೆ | ರೈತರಿಗೆ ಹೊಸ ಕೊಡುಗೆ | ಪುಷ್ಟಿದಾಯಕ ಆಹಾರ ಬೆಳೆಗೆ ಆದ್ಯತೆಗೆ ಸಲಹೆ

**ನವದೆಹಲಿ:** ಅಧಿಕ ಇಳುವರಿ ಕೊಡುವ ಹಾಗೂ ಯಾವುದೇ ಹವಾಮಾನಕ್ಕೂ ಹೊಂದಿಕೊಳ್ಳಬಲ್ಲ 109 ವೈವಿಧ್ಯಮಯ ಬೀಜ ತಳಿಗಳನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಲೋಕಾರ್ಪಣೆ ಮಾಡಿದರು. ಇವು ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಬೀಜಗಳಾಗಿದ್ದು ಉತ್ಪಾದಕತೆ ಹಾಗೂ ರೈತರ ಆದಾಯವನ್ನು ಹೆಚ್ಚಿಸುವುದು ಇದರ ಉದ್ದೇಶವಾಗಿದೆ. ಬೆಳೆಗಳ ಪೌಷ್ಟಿಕತೆಯನ್ನು ಹೆಚ್ಚಿಸುವ ಸಾಮರ್ಥ್ಯದ (ಬಯೋಫೋರ್ಟಿಫೈಡ್) ಈ ಬೀಜಗಳನ್ನು ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಅಭಿವೃದ್ಧಿಪಡಿಸಿದೆ. 61 ಬೆಳೆಗಳಿಗೆ ಸಂಬಂಧಿಸಿದ ಈ ಬೀಜಗಳಲ್ಲಿ 34 ಹೊಲಗಳ ಬೆಳೆಗಳು ಮತ್ತು 27 ತೋಟಗಾರಿಕೆ ಬೆಳೆಗಳದ್ದಾಗಿದೆ. 2024-25ನೇ ಸಾಲಿನ ಬಜೆಟ್‌ನಲ್ಲಿ ಈ ಬೀಜಗಳ ಬಿಡುಗಡೆ ವಿಚಾರವನ್ನು ಪ್ರಸ್ತಾಪಿಸಲಾಗಿತ್ತು.

ದೆಹಲಿಯ ಪುಸಾ ಕ್ಯಾಂಪಸ್‌ನ ಮೂರು ಪ್ರಾಯೋಗಿಕ ಕೃಷಿ ಕೇಂದ್ರಗಳಲ್ಲಿ ಬೀಜಗಳನ್ನು ಬಿಡುಗಡೆ ಮಾಡಿದ ಮೋದಿ, ರೈತರೊಂದಿಗೆ ಸಂವಾದವನ್ನೂ ನಡೆಸಿದರು. ಧಾನ್ಯಗಳು, ಸಿರಿ ಧಾನ್ಯಗಳು, ಮೇವು ಬೆಳೆಗಳು, ಎಣ್ಣೆ ಬೀಜಗಳು, ಕಾಳುಗಳು, ಕಬ್ಬು, ಹತ್ತಿ ಮತ್ತು ಫೈಬರ್ ಬೆಳೆಗಳ ಬೀಜಗಳು ಹೊಲಗಳಲ್ಲಿ ಬೆಳೆಯುವ ಫಸಲಿನ ಬೀಜಗಳಲ್ಲಿ ಸೇರಿವೆ. ವಿವಿಧ ಹಣ್ಣುಗಳು, ತರಕಾರಿಗಳು, ಪ್ಲಾಂಟೇಶನ್ ಬೆಳೆಗಳು, ಟ್ಯೂಬರ್‌ಗಳು, ಸಾಂಬಾರಗಳು, ಹಣ್ಣುಗಳು ಮತ್ತು ಔಷಧೀಯ ಸಸ್ಯಗಳು ತೋಟಗಾರಿಕೆಯ ಬೀಜಗಳಲ್ಲಿ ಸೇರಿವೆ.



ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಕೇಂದ್ರಕ್ಕೆ ಭಾನುವಾರ ಭೇಟಿ ನೀಡಿದ ಪ್ರಧಾನಿ ಮೋದಿ. ಕೃಷಿ ಸಚಿವ ಶಿವರಾಜ್ ಸಿಂಗ್ ಇನ್ನಿತರರು ಇದ್ದರು.

### ಯಾವ್ಯಾವ ಬೀಜಗಳು?

ಧಾನ್ಯಗಳ 23, ಭತ್ತದ ಒಂಬತ್ತು, ಗೋಧಿಯ ಎರಡು, ಬಾರ್ಲಿ, ಬೇಳೆ, ರಾಗಿ, ಛೀನಾ ಮತ್ತು ಸಾಂಬಾದ ತಲಾ ಒಂದು, ಮೆಕ್ಕೆಜೋಳದ ಆರು ಬೀಜ ತಳಿಗಳು ಪ್ರಧಾನಿ ಬಿಡುಗಡೆ ಮಾಡಿದ 109 ತಳಿಗಳಲ್ಲಿ ಒಳಗೊಂಡಿವೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ. ಅರ್ಹರ್, ಹೆಸರುಕಾಳು, ಕಡ್ಲೆ (ತಲಾ 2), ಬಟಾಣಿ, ಸೆಣಬು (ತಲಾ 1), ಎಣ್ಣೆ ಬೀಜ, ಮೇವು ಮತ್ತು ಬ್ಬು (ತಲಾ 7), ಹತ್ತಿ (5), ಮಸೂರ (ಲೆಂಟಿಲ್-3) ಬೀಜ ಕೂಡ ಅವುಗಳಲ್ಲಿ ಸೇರಿವೆ ಎಂದು ಚೌಹಾಣ್ ಹೇಳಿದ್ದಾರೆ.

### ರಾಜ್ಯದ ಹಲವು ತಳಿಗಳು

ಪ್ರಧಾನಿ ನರೇಂದ್ರ ಮೋದಿ ಬಿಡುಗಡೆ ಮಾಡಿದ 109 ಹೊಸ ಬೀಜ ತಳಿಗಳಲ್ಲಿ 13ನ್ನು ಬೆಂಗಳೂರಿನ ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಸಂಶೋಧಿಸಿ ಅಭಿವೃದ್ಧಿ ಪಡಿಸಿದ್ದಾಗಿವೆ. ಪುಷ್ಟಿದಾಯಕ ಆಹಾರ ಲಭ್ಯತೆಯನ್ನು ಖಾತರಿಪಡಿಸಲು ಹೊಸ ತಳಿಗಳನ್ನು ಅಭಿವೃದ್ಧಿಪಡಿಸುವಲ್ಲಿ ದೊಡ್ಡ ಕಾಣಿಕೆ ನೀಡಿರುವ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಡಿ (ಐಸಿಎಆರ್) ಕಾರ್ಯನಿರ್ವಹಿಸುವ ಕೆಲವೇ ಸಂಸ್ಥೆಗಳಲ್ಲಿ ಐಐಎಚ್‌ಆರ್ ಕೂಡ ಒಂದಾಗಿದೆ. ಐಐಎಚ್‌ಆರ್‌ನ ಹೊಸ ಬೀಜ ತಳಿಗಳಲ್ಲಿ ಆಲ್ಫಾನ್ಸೋ ಮಾವಿನ ಹಣ್ಣಿಗೆ ಪರ್ಯಾಯವಾದ ಅರ್ಕಾ ಉದಯ್ ಮತ್ತು ಅರ್ಕಾ ಕಿರಣ್ ಎಂಬ ಪೇರಳೆ ಹಣ್ಣು ಸೇರಿವೆ ಎಂದು ಐಐಎಚ್‌ಆರ್ ಹಿರಿಯ ವಿಜ್ಞಾನಿ ಎಂ.ವಿ. ಧನಂಜಯ ತಿಳಿಸಿದ್ದಾರೆ. ಅರ್ಕಾ ವೈಭವ್, ಅರ್ಕಾ ಶ್ರೇಯಾ ಮತ್ತು ಅರ್ಕಾ ಅಮರ್ ಎಂಬ ತಳಿಗಳು ಪುಷ್ಪ ಕೃಷಿ ಕ್ಷೇತ್ರವನ್ನು ಕ್ರಾಂತಿಕಾರಕಗೊಳಿಸಲಿವೆ. ಪುತ್ತೂರಿನ ಎರಡು ಗೇರುಬೀಜದ ತಳಿಗಳೂ ಸೇರಿವೆ.



### ಸುಸ್ಥಿರ ಕೃಷಿ ಪದ್ಧತಿ

ರೈತರ ಆದಾಯ ಹೆಚ್ಚಾಗಲು ಸುಸ್ಥಿರ ಕೃಷಿ ಪದ್ಧತಿಗಳು ಮತ್ತು ತಾಪಮಾನ ಬದಲಾವಣೆಯನ್ನು ಎದುರಿಸುವಂಥ ವಿಧಾನಗಳನ್ನು ಅನುಸರಿಸುವುದು ಅಗತ್ಯ ಎಂದು ಪ್ರಧಾನಿ ಮೋದಿ ಸಲಹೆ ಮಾಡಿದರು. ಬಯೋಫೋರ್ಟಿಫೈಡ್ ಬೆಲೆಗಳ ತಳಿಗಳನ್ನು ಹೆಚ್ಚಾಗಿ ಉತ್ತೇಜಿಸಬೇಕೆಂದು ಹೇಳಿದ ಪ್ರಧಾನಿ, ಭಾರತದಲ್ಲಿ ಅಪೌಷ್ಟಿಕತೆಯನ್ನು ಎದುರಿಸಲು ಅವುಗಳನ್ನು ಶಾಲಾ ಬಿಸಿಯೂಟ ಯೋಜನೆ ಮತ್ತು ಅಂಗನವಾಡಿ ಸೇವೆ ಮುಂತಾದ ಸರ್ಕಾರಿ ಉಪಕ್ರಮಗಳಿಗೆ ಸಂಪರ್ಕಿಸಬೇಕೆಂದರು. ಸಿರಿಧಾನ್ಯಗಳನ್ನು ಬೆಳೆಸುವುದರ ಮಹತ್ವ ಮತ್ತು ಹೆಚ್ಚು ಪೌಷ್ಟಿಕ ಆಹಾರಗಳಿಗೆ ಆದ್ಯತೆ ನೀಡುವುದು ಅಗತ್ಯ ಎಂದು ಪ್ರಧಾನಿ ಪ್ರತಪಾದಿಸಿದರು. ಸಾವಯವ ಕೃಷಿಯಲ್ಲಿ ನಂಬಿಕೆ ಬೆಳೆಸುವುದು ಕೂಡ ಅಗತ್ಯ ಎಂದರು.

12-08-2024
Vijayavani Pg 09

ಒಂದು ಸಾವಿರ ಸಸ್ಯಗಳ ದಾಖಲಾತಿ ಪೂರ್ಣ | ಇನ್ನೊಂದು ವರ್ಷದಲ್ಲಿ 2 ಸಾವಿರ ಸಸ್ಯ ಪ್ರಭೇದಗಳ ದಾಖಲೀಕರಣ

# ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಹರ್ಬೇರಿಯಂ ದಾಖಲೀಕರಣ

■ ಪಂಕಜ ಕೆ.ಎಂ. ಬೆಂಗಳೂರು

ಎರಡೂವರೆ ಶತಮಾನ ಕಂಡಿರುವ 'ಸಸ್ಯಕಾಶಿ' ಲಾಲ್‌ಬಾಗ್ ಉದ್ಯಾನವನದಲ್ಲಿ ದೇಶ- ವಿದೇಶಗಳ ಮೂರು ಸಾವಿರಕ್ಕೂ ಅಧಿಕ ಸಸ್ಯಪ್ರಭೇದಗಳಿದ್ದು, ಅವುಗಳ ಸಮಗ್ರ ಮಾಹಿತಿಯನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆಯು 'ಹರ್ಬೇರಿಯಂ ದಾಖಲೀಕರಣ' ಕಾರ್ಯ ಕೈಗೊಂಡಿದೆ.

ಈಗಾಗಲೇ 9 ಲಕ್ಷ ರೂ. ವೆಚ್ಚದಲ್ಲಿ ಒಂದು ಸಾವಿರ ವಿವಿಧ ಸಸ್ಯ ಪ್ರಭೇದಗಳ ಹರ್ಬೇರಿಯಂ ದಾಖಲೀಕರಣವಾಗಿದ್ದು, ಇನ್ನೊಂದು ವರ್ಷದೊಳಗೆ ಉಳಿದ 2 ಸಾವಿರ ಸಸ್ಯ ಪ್ರಭೇದಗಳ ದಾಖಲೀಕರಣ ಪೂರ್ಣಗೊಳಿಸಲಾಗುವುದು. ಇದಕ್ಕಾಗಿ ಹೆಚ್ಚುವರಿ 10 ಲಕ್ಷ ರೂ. ಅನುದಾನದ ಅಗತ್ಯವಿದೆ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

**ಹರ್ಬೇರಿಯಂ ದಾಖಲಾತಿ:** ಸಸ್ಯ ಪ್ರಭೇದಗಳ ವಿವಿಧ ಭಾಗಗಳನ್ನು ಸಂಗ್ರಹಿಸಿ ವೈಜ್ಞಾನಿಕ ರೀತಿಯಲ್ಲಿ ಒಣಗಿಸಿ ಹರ್ಬೇರಿಯಂ ಶೀಟ್‌ನಲ್ಲಿ ಅಂಟಿಸಲಾಗುವುದು. ಇದರಲ್ಲಿ ಒಂದು ಬದಿಯಲ್ಲಿ ಎಲೆ, ಬಳ್ಳಿ, ಬೇರು, ತೊಗಟೆ, ಹೂ, ಕಾಯಿ, ಚಿಗುರು ಕಾಂಡ, ಕೋಶ, ಬೇರು ಸೇರಿ ಸಸ್ಯದ ಪೂರ್ಣ ಚಿತ್ರಣ ಇರುತ್ತದೆ. ಮತ್ತೊಂದೆಡೆ ಅವುಗಳ ಹೆಸರು, ಮೂಲ, ಉಗಮ ಸ್ಥಾನ, ಯಾವ ಋತುಮಾನದ್ದು, ಹೂ-ಹಣ್ಣು ಬಿಡುವ ಕಾಲ, ಎಲೆಗಳು ಚಿಗುರುವ ಹಾಗೂ ಒಣಗುವ ಕಾಲ ಸೇರಿ ಸಮಗ್ರ ಮಾಹಿತಿ ದಾಖಲಿಸಲಾಗುವುದು. ಇದರಿಂದ ಭವಿಷ್ಯದಲ್ಲಿ ಸಸ್ಯಶಾಸ್ತ್ರ ವರ್ಗೀಕರಣ, ಪರಿಸರವಿಜ್ಞಾನ, ಔಷಧೀಯ ಸಸ್ಯಗಳ ಕುರಿತು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಹಾಗೂ ಪರಿಸರ ಪ್ರೇಮಿಗಳಿಗೆ ಸಸ್ಯ ಪ್ರಭೇದಗಳ ಸಮಗ್ರ ಮಾಹಿತಿ ಅರಿಯಲು ಹರ್ಬೇರಿಯಂ ದಾಖಲಾತಿ ಸಹಕಾರಿಯಾಗಲಿದೆ.

ವಿಜಯವಾಣಿ ಚಿತ್ರಗಳು





ಹರ್ಬೇರಿಯಂ ದಾಖಲೀಕರಣ ಇನ್ನೊಂದು ವರ್ಷದಲ್ಲಿ ಪೂರ್ಣಗೊಳ್ಳಲಿದ್ದು, ಸಸ್ಯವಿಜ್ಞಾನ ವಿದ್ಯಾರ್ಥಿಗಳಿಗೆ ಹಾಗೂ ಗಿಡ ಮರಗಳ ಬಗ್ಗೆ ಕುತೂಹಲ ಹೊಂದಿರುವವರಿಗೆ, ಜೀವವೈವಿಧ್ಯ ಅಧ್ಯಯನಕಾರರಿಗೆ ಸಸ್ಯ ಪ್ರಭೇದಗಳ ಸಂಪೂರ್ಣ ಮಾಹಿತಿ ತಿಳಿಯಲು ನೆರವಾಗಲಿದೆ.

| ಎಂ. ಜಗದೀಶ್
ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ



## ನಾಲ್ಕು ವಿಶೇಷ ರ್‍ಯಾಕ್‌ಗಳ ಅಳವಡಿಕೆ

ಹರ್ಬೇರಿಯಂ ದಾಖಲಾತಿ ಕಾರ್ಯ ನಡೆಸಲು ಲಾಲ್‌ಬಾಗ್‌ನಲ್ಲಿ ಪ್ರತ್ಯೇಕ ಘಟಕ ತೆರೆಯಲಾಗಿದೆ. ತಯಾರಿಸಿದ ಹರ್ಬೇರಿಯಂ ಶೀಟ್‌ಗಳನ್ನು ಒಪ್ಪವಾಗಿಡಲು ನಾಲ್ಕು ವಿಶೇಷ ರ್‍ಯಾಕ್‌ಗಳನ್ನು ಅಳವಡಿಸಲಾಗಿದ್ದು, ಈವರೆಗೆ ಸಿದ್ಧಪಡಿಸಿರುವ ಹರ್ಬೇರಿಯಂ ಶೀಟ್‌ಗಳನ್ನು ಕ್ರಮಸಂಖ್ಯೆ ಆಧಾರದಲ್ಲಿ ಜೋಡಿಸಲಾಗಿದೆ. ಒಂದು ಹರ್ಬೇರಿಯಂ ಶೀಟ್ ಸಿದ್ಧಪಡಿಸಲು 15ರಿಂದ 20 ದಿನ ಬೇಕಾಗುತ್ತದೆ. ಹಿರಿಯ ಸಸ್ಯಶಾಸ್ತ್ರಜ್ಞ ಡಾ. ಕೇಶವಮೂರ್ತಿ ನೇತೃತ್ವದಲ್ಲಿ ಇಬ್ಬರು ಸಸ್ಯ ವರ್ಗೀಕರಣ ಶಾಸ್ತ್ರಜ್ಞರನ್ನು ಈ ಕಾರ್ಯದಲ್ಲಿ ತೊಡಗಿದ್ದಾರೆ.

## ಮಾಹಿತಿಗಳ ಡಿಜಿಟಲೀಕರಣ

ಹರ್ಬೇರಿಯಂ ದಾಖಲೀಕರಣ ಪೂರ್ಣಗೊಂಡ ಬಳಿಕ ಈ ಎಲ್ಲ ಸಸ್ಯ ಪ್ರಭೇದಗಳ ಕುರಿತು ಸಮಗ್ರ ಮಾಹಿತಿ ಒಳಗೊಂಡ 'ಲಾಲ್‌ಬಾಗ್‌ನ ಸಸ್ಯ ಸಂಪತ್ತು' (ಪ್ಲಾಂಟ್ಸ್ ವೆಲ್ತ್ ಆಫ್ ಲಾಲ್‌ಬಾಗ್) ಪುಸ್ತಕವನ್ನು ಹೊರತರಲಾಗುವುದು. ಜತೆಗೆ ಲಾಲ್‌ಬಾಗ್‌ನಲ್ಲಿರುವ ಎಲ್ಲ ಸಸ್ಯ ಪ್ರಭೇದಗಳನ್ನು ಬಳ್ಳಿ, ಮರ, ಗಿಡ, ಔಷಧೀಯ ಸಸ್ಯ, ಅಲಂಕಾರಿಕ ಸಸ್ಯಗಳನ್ನು ವರ್ಗೀಕರಿಸಿ ಹಲವು ಸಂಪುಟಗಳ ಪುಸ್ತಕಗಳನ್ನು ಮುದ್ರಿಸಲಾಗುವುದು. ಈ ಕಾರ್ಯ ಪೂರ್ಣಗೊಂಡ ನಂತರ ಈ ಎಲ್ಲ ಮಾಹಿತಿಯನ್ನು ಡಿಜಿಟಲೀಕರಣಗೊಳಿಸಲಾಗುವುದು. ಇದಕ್ಕಾಗಿ ಈಗಾಗಲೇ ಸಸ್ಯಗಳ ಜಿಪಿಎಸ್ ಆಧಾರಿತ ಛಾಯಾಚಿತ್ರಗಳನ್ನು ಸಂಗ್ರಹಿಸಿಡುವ ಕಾರ್ಯವೂ ನಡೆಯುತ್ತಿದೆ ಎನ್ನುತ್ತಾರೆ ಅಧಿಕಾರಿಗಳು.



# PM push for high-yielding, biofortified crops

Modi releases 109 new seed varieties of 61 crops; move aimed at increasing farm yield as well as farmers' income

JITENDRA CHOUBEY @ New Delhi

12-08-2024
Ind Exp Pg 09



PM Narendra Modi during the release of 109 crop varieties, at India Agricultural Research Institute in New Delhi on Sunday | PTI

PRIME Minister Narendra Modi released 109 high-yielding, climate-resilient and bio-fortified varieties of 61 crops, including 34 field crops and 27 horticultural crops.

The government's decision aims to enhance farm productivity and farmers' income.

Developed by the Indian Council of Agricultural Research (ICAR), these varieties span 61 crops, including 34 field and 27 horticultural crops.

Modi unveiled the seeds at three experimental agriculture plots at Delhi's Pusa Campus, where he also interacted with farmers and scientists.

Among the field crops, seeds of various cereals including millets, forage crops, oilseeds, pulses, sugarcane, cotton, fibre and other potential crops were released. Among the horticultural crops, different varieties of fruits, vegetable crops, plantation crops, tuber crops, spices, flowers and medicinal crops were released.

The PM lauded the scientists for the development of these varieties. "These seeds are the best example of a lab-to-land programme," said Modi.

Among the crops released by Modi are 23 cereals, 11 pulses, seven oilseeds, and 40 varieties of fruits, vegetables, flowers, and medicinal plants.

Scientists associated with these high-yielding varieties of crops said there are nine rice seeds, two wheat seeds, six Maize seeds, two pigeon pea and chickpea, and three lentil seeds. To increase the output of oilseeds, the government released two soybean and two groundnut oil seeds.

Among fruits are three mango varieties, two guava, and one pomegranate, and among vegetables, two tomatoes and Indian beans, one each of bottle gourd and okra.

In his interaction with farmers, Modi stressed the significance of value addition in agriculture. He also discussed the importance of millets and underlined how people are moving towards nutritious food.

According to an official statement, Modi stressed the significance of value addition in agriculture while discussing the importance of these new varieties with farmers.

The farmers said that these new varieties would be highly beneficial to them because of a lower input cost.

The farmers lauded the role played by Krishi Vigyan Kendras (KVK) in creating awareness.

Later addressing the media, the Union Minister for Agriculture and Farmers Welfare Shivraj Singh Chouhan said the new seed varieties would help increase farmers' income, enhance production and reduce costs. "The seeds of these crops are climate-friendly, can yield good crops even in adverse weather, and are rich in nutrition," said Chouhan.

Modi suggested that the KVKs proactively informed farmers about the benefits of the new varieties being developed every month to create awareness, the statement said.

Since 2014, Modi has advocated for sustainable farming practices and climate-resilient methodologies to bolster farmers' income.

# Gumless jackfruit & monkey guns big draws at Santhe

Pearl.DSouza@timesofindia.com

Pics: Chethan Shivakumar





The three-day Sasya Santhe concluded at Gandhi Krishi Vigyana Kendra on Sunday

12-08-2024
Times of Ind Pg 09

**Bengaluru:** Panduranga Bhat from Puttur was flaunting a no-pellet gun to scare monkeys. All that the gun needed was a stone along with a firecracker. On pulling the trigger, the gun ignited a green-coloured explosion similar to that caused by mini-bombs used for festival celebrations.

Bhat's gun was among the displays put up by 80 nurseries, seed companies, artisans, processed food vendors, fertiliser startups, and agriculture and horticulture researchers grabbing eyeballs at the three-day Sasya Santhe, the sapling fair that concluded at the Gandhi Krishi Vigyana Kendra (GKVK) on Sunday. Open to the public, the annual fair attracted about 25,000 locals, providing nurseries from different parts of Karnataka with a revenue of lakhs of rupees, said Doddabasappa, professor of entomology and a member of the Sasya Santhe organising committee. "Krishi Mela happens at the end of the year and there is no rain at that time. This month is likely to see moisture for the growth of agricultural and horticultural crops and hence a good time to acquaint locals with it. To attract the gathering, old agricultural implements were displayed," he added.

GKVK researchers displayed insects like honeybees and termites (which degrade the stubbles in the field and pulverise the soil). Processed food products that were made on a small scale on the campus, fruit grafts and vegetable seeds were sold.

Amla and breadfruit were in high demand. "Around 1 quintal (100kg) of amla harvested on campus was sold out. Its freshness and medicinal properties were driving up the demand. We had harvested 50kg of breadfruit each day, and it was sold out, considering the festival time," added Doddabasappa.

Shubha, from National Seeds Corporation Ltd, was fielding questions on the African tall maize from several visitors. "It can be stored for a few years and then sowed. One bag of 5kg is sufficient for an acre of land. The demand for it comes from its use as cattle fodder. This cannot be consumed by humans."

Gumless jackfruit saplings were in high demand. Visitors were seen buying vegetable seeds and flower saplings, making inquiries about growing lotuses at home while also ensuring no mosquito breeds, the difference between wild honey and that grown on farms, and produce from cold-pressed oils.

Even as products were being marketed, there were serious concerns expressed about the quality of water and pollutants that have made their way into the food chain.

Lakeman Anand Malligavad, who was the chief guest at the programme and was honoured for his contribution to conserving the lakes, said, "Dakshina Pinakini river has 32 streams — Hebbal, Koramangala, Challaghatta among other valleys — if all lakes are purified, the river will change. That will impact the 80,000 hectares of cultivation of vegetables that come to Bengaluru. Earlier, the water was pristine from Nandi Hills, but now with chemicals polluting the water, the pollutants come back to us through the vegetables and milk we consume."

# Three edible bug species found in the Northeast

R KRISHNAKUMAR
BENGALURU, DHNS

Entomologists from Ashoka Trust for Research in Ecology and the Environment (ATREE), Bengaluru, have discovered three new species from edible bugs traditionally consumed by indigenous people of northeast India. Their discovery underlines the urgency to document and protect traditional knowledge of insects across applications.

The research emphasises that several of the species, while popular as food among indigenous communities, are undocumented and calls for stronger conservation practices in the region.

The team documented more than 500 species of edible insects, including grasshoppers, caterpillars, beetles, termites, bees, wasps, ants, cicadas, and aquatic insects, from across North-East India. A closer look at 'stink bugs', sold in markets during certain seasons, led the researchers to their identification as members of the genus Coridius, of the family Dinidoridae (Hemiptera).

Ranging from 15 cm to 25 cm in size, the Coridius bugs mainly feed on plant sap. The genus comes in 35 plant-feeding terrestrial species, found in Afrotropical and Indo-Malayan regions. The three new species – Coridius adii, Coridius esculentus, and Coridius insperatus – were discovered in Arunachal Pradesh.



**(L-R): Coridius insperatus, Coridius adii, and Coridius esculentus.**
CREDIT: SWAPNIL BOYANE

The research team was led by Priyadarsanan Dharma Rajan, a senior fellow at ATREE, and comprised Swapnil Boyane, Sandeep Sen, and Pavan Kumar Thunga from ATREE, and Hemant Ghate from Modern College, Pune. Their work has been published in the open-access journal PLOS ONE.

## Preserving for posterity

In northeast India, entomophagy – the practice of eating insects – is both tradition and sustenance, with many communities using insects as food and medicine.

"Many of these species have not been identified. They have potential in pharmaceutical applications. Indigenous knowledge has to be codified and preserved to ensure that the communities remain stakeholders.

"Then, there is the issue of side effects caused by the consumption of some of these insects – this has to be addressed through chemical ecological studies and high throughput screening of the insects consumed," Priyadarsanan, the senior author of the paper, told *DH*.

Consumption of some of the dark-coloured bugs triggered a neurotoxic effect, with the affected people showing signs of wanting to hide under carpets or beds. These bugs were identified under the new species, Coridius esculentus.

"The findings are important because they could help mainstream the idea of insects as a protein source to, at least, complement environmentally unsustainable livestock production," Priyadarsanan said.

The study was supported by the Department of Biotechnology through a research project titled Bio-resource and Sustainable Livelihoods in northeast India.

12-08-2024
Times of Ind Pg 09

# ಕೃಷಿ ಯೋಜನೆ ಲಾಭ ಪಡೆಯಿರಿ

**ರಾಮನಗರ:** ಗ್ರಾಮೀಣ ಪ್ರದೇಶದಲ್ಲಿ ರೈತರು ಬೆಳೆಯುವ ಕೃಷಿ ಉತ್ಪನ್ನಗಳನ್ನು ಕಟಾವಿನ ನಂತರ ಮಳೆ ಹಾಗೂ ಇತರೆ ಹವಾಮಾನ ವೈಪರೀತ್ಯಗಳಿಂದ ಸಂರಕ್ಷಿಸಿ ಉತ್ತಮ ಸಂಸ್ಕರಣೆಗೆ ಒಳಪಡಿಸಿ ಗುಣಮಟ್ಟದ ಉತ್ಪನ್ನಗಳನ್ನು ಒದಗಿಸುವುದಲ್ಲದೇ, ರೈತರಿಗೆ ಹೆಚ್ಚಿನ ಬೆಲೆಯನ್ನು ಸಹ ಒದಗಿಸಿಕೊಡುವುದರಿಂದ ಅವರ ಆರ್ಥಿಕ ಸ್ಥಿತಿ ಉತ್ತಮಪಡಿಸುವ ಉದ್ದೇಶದಿಂದ ಕೃಷಿ ಸಂಸ್ಕರಣಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಯೋಜನೆಯಲ್ಲಿ ಕೃಷಿ ಉತ್ಪನ್ನ ಸಂಸ್ಕರಣಾ ಘಟಕಗಳಾದ ರಾಗಿ ಕ್ಲೀನಿಂಗ್ ಮಿಷನ್, ಫ್ಲೋರ್ ಮಿಲ್, ಪಲ್ವಾರೈಸರ್, ತೊಗರಿ ಬೇಳೆ ಮಾಡುವ ಯಂತ್ರ, ರಾಗಿ ಪಾಲಿಶಿಂಗ್ ಮಿಷನ್, ಶುಗರ್ ಕೇನ್ ಜ್ಯೂಸ್ ಮೇಕಿಂಗ್ ಮಿಷನ್ ಹಾಗೂ ಸಣ್ಣ ಯಂತ್ರಚಾಲಿತ ಎಣ್ಣೆಗಾಣಗಳನ್ನು ಅನುಮೋದನೆಗೊಂಡ ಸಂಸ್ಥೆಗಳಡಿ ಸಾಮಾನ್ಯ ವರ್ಗಕ್ಕೆ ಶೇ.50 ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರಿಗೆ ಶೇ. 90ರ ಸಹಾಯಧನದಲ್ಲಿ ಜೇಷ್ಠತೆ ಹಾಗೂ ಸಹಾಯಧನದ ಲಭ್ಯತೆ ಮೇರೆ ವಿತರಿಸಲಾಗುತ್ತಿದೆ.

ಕೃಷಿಯಲ್ಲಿ ಕೃಷಿ ಕಾರ್ಮಿಕರ ಕೊರತೆ ನೀಗಿಸಿ ಉತ್ಪಾದನಾ ವೆಚ್ಚ ತಗ್ಗಿಸಿ ರೈತರಿಗೆ ಹೆಚ್ಚಿನ ಆರ್ಥಿಕ ಲಾಭ ಪಡೆಯಲು ಅನುವು ಮಾಡಿಕೊಡಲು ಕೃಷಿ ಯಾಂತ್ರೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ(ಪಿಎಂಕೆಎಸ್‌ವೈ) ಕೃಷಿಯಲ್ಲಿ ನೀರಿನ ಸಮರ್ಥ ಬಳಕೆಯನ್ನು ಉತ್ತೇಜಿಸುವ ಸಲುವಾಗಿ ಸೂಕ್ಷ್ಮ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಎಲ್ಲಾ ವರ್ಗದ ರೈತರಿಗೆ ಶೇ. 90ರ ಸಹಾಯಧನದಲ್ಲಿ ಅನುಮೋದಿತ ಸಂಸ್ಥೆಗಳ ತುಂತುರು ನೀರಾವರಿ ಘಟಕಗಳನ್ನು ವಿತರಣೆ ಮಾಡಲಾಗುವುದು.

ಸವಲತ್ತುಗಳನ್ನು ಪಡೆಯಲು ರೈತರು ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರಗಳಲ್ಲಿ ಅರ್ಜಿಯ ಜೊತೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸುವಂತೆ ಹೆಚ್ಚಿನ ಮಾಹಿತಿಗೆ ಹತ್ತಿರದ ರೈತ ಸಂಪರ್ಕ ಕೇಂದ್ರ/ಸಹಾಯಕ ಕೃಷಿ ನಿರ್ದೇಶಕರ ಕಚೇರಿಗಳ ಅಧಿಕಾರಿಗಳನ್ನು ಸಂಪರ್ಕಿಸುವಂತೆ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

12-08-2024
Hosadiganta Pg 08

# ಶಿರಾದಲ್ಲಿ ವಿಷಕಾರಿ ಹವಳದ ಹಾವು ಪತ್ತೆ

12-08-2024
Hosadiganta Pg 09

**ತುಮಕೂರು:** ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಸಣ್ಣ ವಿಷಕಾರಿ ಹವಳದ ಹಾವು ಪತ್ತೆಯಾಗಿದೆ.

ಭಾರತದಲ್ಲಿ ಕಂಡು ಬರುವ 60 ಪ್ರಬೇಧದ ವಿಷಯುಕ್ತ ಹಾವುಗಳಲ್ಲಿ ಅತ್ಯಂತ ಸಣ್ಣ ವಿಷಕಾರಿ ಹವಳದ ಹಾವು ಪ್ರಥಮ ಬಾರಿಗೆ ಜಿಲ್ಲೆಯ ಶಿರಾ ತಾಲೂಕಿನ ಬುಕ್ಕಾಪಟ್ಟಣ ವನ್ಯಜೀವಿ ಧಾಮದಲ್ಲಿ ಕಂಡು ಬಂದಿದೆ ಎಂದು ವನ್ಯಜೀವಿ ಜಾಗೃತಿ ನಿಸರ್ಗ ಸಂಸ್ಥೆಯ ಅಧ್ಯಕ್ಷ ಬಿ.ವಿ.ಗುಂಡಪ್ಪ ಮತ್ತು ಶಿರಾ ತಾಲೂಕಿನ ಬುಕ್ಕಾಪಟ್ಟಣ ವನ್ಯಜೀವಿ ಧಾಮದ ಜೀವ ವೈವಿಧ್ಯ ಅಧ್ಯಯನ ತಂಡದ ಅಧ್ಯಕ್ಷ ಬಿ.ವಿ.ಗುಂಡಪ್ಪ ಹಾಗೂ ಡಾ.ಜಿ.ಎಸ್.ಮಹೇಶ್, ಡಾ.ಡಿ.ಆರ್.ಪ್ರಸನ್ನ ಕುಮಾರ್, ಚಂದ್ರಶೇಖರ್ ಉಪಾಧ್ಯಾಯ, ವೆಂಕಟೇಶ್ ಉಪಾಧ್ಯಾಯ, ಮಲ್ಲಿಕಾರ್ಜುನ್. ಎಂ. ಪತ್ತೆ ಮಾಡಿದ್ದಾರೆ.

ಹವಳದ ಹಾವುಗಳು ಸುಮಾರು 30 ರಿಂದ 40 ಸೆಂ.ಮೀ ವರೆಗೆ ಬೆಳೆಯುವ ಸಣ್ಣದಾದ ದುಂಡಾದ ಹಾವಾಗಿವೆ. ಇದರ ದೇಹವು ತಲೆಯಿಂದ ಬಾಲದವರೆಗೆ ತೆಳ್ಳಗೆ ಸಿಲಿಂಡರ್ ಆಕಾರದಲ್ಲಿ ಏಕರೂಪವಾಗಿರುತ್ತದೆ.

ಈ ಹಾವುಗಳು ದಕ್ಷಿಣ ಭಾರತದ ದಖ್ಖನ್



ಪ್ರಸ್ಥಭೂಮಿಯ ಒಣ ಎಲೆ ಉದುರುವ ಕಾಡು ಹಾಗೂ ತೇವ ಭರಿತ ಎಲೆ ಉದುರುವ ಕಾಡುಗಳಲ್ಲಿ ಮಾತ್ರ ಕಂಡುಬರುವ ಅಪರೂಪದ ಹಾವುಗಳಾಗಿವೆ. ತೇವ ಭರಿತ

- **ಬುಕ್ಕಾಪಟ್ಟಣ ವನ್ಯಜೀವಿ ಧಾಮದಲ್ಲಿ ಜೀವ ವೈವಿಧ್ಯ ಅಧ್ಯಯನ ತಂಡದಿಂದ ಪತ್ತೆ: ಬಿ.ವಿ.ಗುಂಡಪ್ಪ**

ಮೃದು ಮಣ್ಣು ಮತ್ತು ಕಲ್ಲುಗಳ ಕೆಳಗೆ, ಒಣಗಿ ಬಿದ್ದು ಕೊಳೆಯುತ್ತಿರುವ ಮರಗಳು ಮತ್ತು ಒಣ ತರಗೆಲೆಗಳ ಕೆಳಗೆ ವಾಸಿಸುತ್ತದೆ. ನಿಶಾಚರಿಗಳಾಗಿದ್ದು ರಾತ್ರಿ ವೇಳೆ ಇವುಗಳ ಚಟುವಟಿಕೆ ಜಾಸ್ತಿ ಇರುತ್ತದೆ. ಇವುಗಳ ಆಹಾರವೆಂದರೆ ಹುಳು,ಹಾವು, ಗೆದ್ದಲು, ಇರುವೆ ಮತ್ತು ಇತರೆ ಕೀಟಗಳ ಮೊಟ್ಟೆಗಳನ್ನು ತಿನ್ನುತ್ತವೆ.

ಪ್ರಪಂಚದಲ್ಲಿ ಸುಮಾರು 3789 ಪ್ರಬೇಧದದ ಹಾವುಗಳಿದ್ದರೆ, ಭಾರತದಲ್ಲಿ 300 ಪ್ರಬೇಧದ

12-08-2024
Times of Ind Pg 09

ಅವುಗಳಲ್ಲಿ 60 ಪ್ರಬೇಧದ ಹಾವುಗಳು ವಿಷಯುಕ್ತ ಹಾವುಗಳಾಗಿವೆ. 40ಕ್ಕಿಂತ ಹೆಚ್ಚು ಅರೆ-ವಿಷಕಾರಿ ಹಾವು ಗಳಾಗಿದ್ದು 180 ಪ್ರಬೇಧದ ಹಾವುಗಳು ವಿಷ ರಹಿತವಾಗಿವೆ. ಜಿಲ್ಲೆಯಲ್ಲಿ ಒಟ್ಟು 38 ಪ್ರಬೇಧದ ಹಾವುಗಳನ್ನು ಗುರುತಿಸಲಾಗಿದ್ದು 6 ವಿಷಯುಕ್ತ ಹಾವುಗಳು ನಮ್ಮ ಜಿಲ್ಲೆಯಲ್ಲಿವೆ.